ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, 31st August, 1974/ Bhadrapada 10, 1896 S.E.

The House met in the Assembly Chamber, Vidhana Soudha, at Thirty Minutes past Eight of the Clock.

MADAM SPEAKER [SRIMATI K. S. NAGARATHNAMMA] in the Chair.

STARRED QUESTIONS
(to which Oral Answers were given)

Agricultural Colonies Started by Social Welfare Department

215 Sri K. PRABHAKAR (Varthur).—

Will the Minister for Community Development and Social Welfare be pleased to state :—

(*a*) the number of Agricultural Colonies, State and Centrally sponsored, started by the Social Welfare Department in the State;

(*b*) the extent of land covered by each such colony and whether the land is;

(i) Gomal land
(ii) Forest land
(iii) Excise land
(iv) Kharab land

and the extent of land held by each family;

(*c*) the number of families settled when each of these colonies was started and the number of families now living there;

(*d*) whether any irrigation facilities have been provided in these colonies ?

Sri N. RACHAIAH.—(Minister for Community Development and Social Welfare) :—

(*a*) State Sector	...	149
Central Sector	...	42
Total	...	191

* (*b*) *Vide* Statement 'A, placed on the Table of the House.
* (*c*) *Vide* Statement 'B, placed on the Table of the House,
* (*d*) *Vide* Statement 'C, placed on the Table of the House.

* copies placed in the Karnataka Legislature library *Vide* No. 21 dated 31-8-1974.

ಶ್ರೀ ಕೆ. ಪ್ರಭಾಕರ್.—ಉತ್ತರದಲ್ಲಿ ರಾಜ್ಯದ ಪರವಾಗಿ ಮತ್ತು ಕೇಂದ್ರದ ಪರವಾಗಿ 191 ಕಾಲೋನಿಗಳನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಲಾಗಿದೆ. ಇಷ್ಟೂ ಕಾಲೋನಿಗಳ ಮತ್ತಷ್ಟು ಪುರೋಭಿವೃದ್ಧಿಯ ಸಾಧನೆಯ ಸಲುವಾಗಿ ಇವುಗಳ ಅಡಳಿತವನ್ನೂ ನುಷ್ಠಿಯಲ್ಲಿಡುವಂತೆ ಮಾಡುವುದಕ್ಕಾಗಿ ಇಲ್ಲಿ ಒಂದು ಪ್ರತ್ಯೇಕ ಬೋರ್ಡನ್ನು ಸರ್ಕಾರದವರು ರಚನೆ ಮಾಡುತ್ತಾರೆಯೇ ?

† ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರ ಸಲಹೆಯೇನೋ ಸೂಕ್ತವಾಗಿದೆ. ಆದರೆ ರಾಜ್ಯ ಸರ್ಕಾರದವರು ಈಗಾಗಲೇ ಇವುಗಳ ಬಗ್ಗೆ ಮೂರು ಅಡ್ಮಿನಿಸ್ಟ್ರೇಜರಿ ಬೋರ್ಡುಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇದಕ್ಕೆ ಹಾಗೆ ಒಂದು ಪ್ರತ್ಯೇಕ ಬೋರ್ಡಿನ ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಕೆ. ಪ್ರಭಾಕರ್.—ಕೇಂದ್ರ ಸರ್ಕಾರದ ನೆರವಿನಿಂದ ಪ್ರಾರಂಭವಾದ ಕೆಲವು ಅಗ್ರಿಕಲ್ಚರ್ ಕಾಲೋನಿಗಳು ಪೂರ್ಣವಾಗದೆ ಹಾಗೆ ಅರ್ಧಮುರ್ಧವಾಗಿ ಉಳಿದಿವೆ. ಅಂಥವುಗಳನ್ನು ಪೂರ್ಣಗೊಳಿಸಲು ಏನು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದಿದ್ದಾರೆ?

ಶ್ರೀ ಎನ್. ರಾಚಯ್ಯ.—ಅವುಗಳಲ್ಲಿ ಕೆಲವು ಚೆನ್ನಾಗಿ ನಡೆಯುತ್ತಿವೆ. ಇನ್ನು ಕೆಲವು ಇಲ್ಲ. ಅಂಥವುಗಳನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ವಹಿಸಿಕೊಟ್ಟರೆ ಆ ಬಗ್ಗೆ ನಾವು ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ. ಪ್ರಭಾಕರ್.—ಈ ಕಾಲೋನಿಗಳು ಪ್ರಾರಂಭವಾಗುವ ಕಾಲಕ್ಕೆ ಎಷ್ಟೊಷ್ಟು ಸಂಸಾರಗಳು ಅಲ್ಲಿದ್ದವು ಮತ್ತು ಈ ಕಾಲೋನಿಗಳಲ್ಲಿ ಎಷ್ಟು ಭೂಮಿ ಇತ್ತು ಅನ್ನುವುದನ್ನು ಗಣನೆಗೆ ತೆಗೆದುಕೊಂಡು ನೋಡಿದರೆ ಈ ದಿವಸ ಅಲ್ಲಿ ಅಷ್ಟು ಸಂಸಾರಗಳೂ ಇಲ್ಲ ಅಷ್ಟು ಭೂಮಿ ಕೂಡ ಇಲ್ಲ. ಇದನ್ನು ಮತ್ತೆ ಪರಿಶೀಲನೆ ಮಾಡಿ ಯಾರು ಯಾರು ಆ ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೋ ಅಂಥವರನ್ನು ಬಿಡಿಸಿ ಮತ್ತೆ ಆ ಭೂಮಿಯನ್ನು ಹರಿಜನರಿಗೆ ಕೊಡುತ್ತೀರಾ?

ಶ್ರೀ ಎನ್. ರಾಚಯ್ಯ.—ಅದು ಸಾಧ್ಯವಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಅನೇಕ ಸ್ಥಳಗಳಲ್ಲಿ ಇವು ಸರಿಯಾಗಿ ಕೆಲಸಮಾಡುತ್ತಿಲ್ಲ. ಸ್ಥಳೀಯ ಅಧಿಕಾರಿಗಳು ಅದಕ್ಕೆ ಸೂಕ್ತ ಗಮನಕೊಡುತ್ತಿಲ್ಲ. ಅವರು ಇದರತ್ತ ಸೂಕ್ತಗಮನ ಕೊಡುವಂತೆ ಮಾಡುತ್ತೀರಾ?

ಶ್ರೀ ಎನ್. ರಾಚಯ್ಯ.—ಅದನ್ನು ಇನ್‌ವೆಸ್ಟಿಗೇಷನ್ ಮಾಡಿಸುತ್ತೇ ಇದ್ದೇನೆಂದು ಆಗಲೇ ಹೇಳಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಕಾಲೋನಿಗಳಲ್ಲಿರತಕ್ಕ ಭೂಮಿಯನ್ನು ಎಷ್ಟು ವರ್ಷಗಳತನಕ ಅವರಿಗೆ ಪಟ್ಟೆ ಇಟ್ಟು ಕೊಡಬಾರದೆಂದು ಮಾಡಿದ್ದೀರಾ ?

ಶ್ರೀ ಎನ್. ರಾಚಯ್ಯ.—ಕೆಲವು ಕಾಲೋನಿಗಳಲ್ಲಿ ಭೂಮಿಯನ್ನು ಹರಿಜನರಿಗೆ ವೈಯಕ್ತಿಕವಾಗಿ ಮಂಜೂರು ಮಾಡಿದ್ದೇವೆ. ಇನ್ನು ಕೆಲವು ಕಡೆ ಸೊಸೈಟಿಗಳನ್ನು ಮಾಡಿ ಅದರ ಮೂಲಕ ಭೂಮಿಯನ್ನು ಕೊಟ್ಟಿದೆ. ಆದರೆ ಸೊಸೈಟಿಯ ಮೂಲಕ ಕೊಟ್ಟಿರತಕ್ಕ ಕಡೆ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುವುದಿಲ್ಲ—ಆ ಭೂಮಿಯನ್ನು ಆಯಾಯ ಜನರ ಹೆಸರಲ್ಲಿ ಮಂಜೂರು ಮಾಡಿಕೊಟ್ಟರೆ ಒಳ್ಳೆಯದೆಂದು ಹೊನಕೋಟೆ ಮತ್ತು ಗೋರಿಬಿದನೂರು ತಾಲ್ಲೂಕುಗಳಲ್ಲಿ ಜನರು ಮನವಿಗಳನ್ನು ಮಾಡಿಕೊಂಡಿದ್ದಾರೆ. ಅದನ್ನು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ. ಈ ಕಾಲೋನಿಗಳಲ್ಲಿ ಸಾಕಷ್ಟು ಪ್ರಗತಿಯಾಗದಿರುವುದಕ್ಕೆ ಕಾರಣ ಅವುಗಳು ಪ್ರಾರಂಭವಾದ ಮೊದಲನೆ ವರ್ಷ ಆಹಾರದ ಕೊರತೆ ಇರುವುದರಿಂದ ಹಾಗಾಗಿದೆ. ಅದುದರಿಂದ ಅದನ್ನು ನೀಗುವುದಕ್ಕೆ ಸರ್ಕಾರದವರು ಮೊದಲನೇ ವರ್ಷದಲ್ಲಿ ಅವರಿಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸುತ್ತಾರೆಯೇ?

ಶ್ರೀ ಎನ್. ರಾಚಯ್ಯ.—ಇದನ್ನು ಹೊಸ ಕಾಲೋನಿಗಳ ಬಗ್ಗೆ ಪರಿಶೀಲನೆಮಾಡಬಹುದು. ಮಾನ್ಯ ಸದಸ್ಯರು ಹೇಳಿದ್ದು ಹಳೇ ಕಾಲೋನಿಗಳಿಗೆ ಅನ್ವಯವಾಗುವುದಿಲ್ಲ. ನಾನು ಈಗಾಗಲೇ ಈ ಕಾಲೋನಿಗಳನ್ನೆಲ್ಲಾ ನೋಡಿಕೊಂಡು ಬಂದಿದ್ದೇನೆ. ಆದರೆ ಅಲ್ಲಿ ಬಂದಿರತಕ್ಕ ಒಂದು ದೊಡ್ಡ ಕೊರತೆ ಎಂದರೆ ಈ ಕಾಲೋನಿಗಳಲ್ಲಿ ನೀರಾವರಿ ಸೌಲಭ್ಯಗಳು ಇರುವುದಿಲ್ಲ. ಅದನ್ನು

† indicate that remarks of speeches have not been revised by the member concerned.

ಒದಗಿಸುವುದಕ್ಕೆ ನಾಲ್ಕನೇ ಯೋಜನೆಯಲ್ಲಿ ಕಮ್ಯುನಿಟಿ ಇರಿಗೇಷನ್ ವೆಲ್ಸ್‌ಗಳನ್ನು ಪ್ರೊವೈಡ್ ಮಾಡಲಾಗಿತ್ತು. ಆದರೆ ಈಗ ಆ ಒಂದು ಸೌಲಭ್ಯಗಳನ್ನು ಕನಿಷ್ಟಪಕ್ಷ ಹರಿಜನ ಕಾಲೋನಿಗಾದರೂ ಐದನೇ ಯೋಜನೆಯಲ್ಲಿ ಒದಗಿಸುವುದಕ್ಕೆ ಎಂದಾದರೂ ಎಲ್ಲಿ ಐದು ಹತ್ತು ಜನರು ಸೇರಿಕೊಂಡು 10—20 ಎಕರೆ ಭೂಮಿ ಜಮೀನಿರುತ್ತದೋ ಅಲ್ಲಿ ಈ ಬಾವಿಗಳ ಸೌಕರ್ಯವನ್ನು ಒದಗಿಸುವುದಕ್ಕೆ ಆದೇಶ ನೀಡಿದೆ. ಪರಿಶೀಲಿಸಿ ಕೂಡಲೆ ಅವನ್ನು ಮಂಜೂರು ಮಾಡಲಾಗುವುದು.

ಶ್ರೀ ಕೆ. ಪ್ರಭಾಕರ್.—ಈ ಕಾಲೋನಿಗಳಲ್ಲಿ ಇರತಕ್ಕ ಜನರಿಗೆ ಅಗತ್ಯವಾದ ವಸ್ತುಗಳು ಸುಲಭವಾಗಿ ದೊರೆಯುವಂತೆ ಮಾಡಲು ಅಲ್ಲಿ ಒಂದೊಂದು ಮಲ್ಟಿಪರ್ಪಸ್ ಸೊಸೈಟಿಗಳನ್ನು ಸ್ಥಾಪನೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಕೆಲವು ಕಡೆ ಕಾರ್ಡ್‌ಗಳನ್ನು ಹಂಚಲಾಗಿದೆ. ಅಲ್ಲಿ ಫೇರ್‌ಪ್ರೈಸ್ ಡಿಪೋಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

Scheduled Castes Boys and Girls Hostels in Gulbarga District

287. Sri M. MALLIKARJUNA KHARGE (Gurumitkal).—

Will the Minister for Community Development and Social Welfare be pleased to state:—

(*a*) the number of Scheduled Caste Boys and Girls Hostels sanctioned in the State during the year 1974--75 ;

(*b*) the number of such hostels sanctioned in Gulbarga Disteict ;

(*c*) whether the Government has got a y proposal to start hostels for Technical students belonging to Scheduled Castes and Scheduled Tribes in the State ?

Sri N. RACHAIAH (Minister for Community Development and Social Welfare).—

(*a*) Nil.

(*b*) Does not arise in view of the reply to clause (*a*).

(*c*) No.

Sri M. MALLIKARJUNA KHARGE.—Supplementary to (a): There is acute shortage of hostels and due to shortage of accommodation, many of the Social Welfare Department officers are refusing to take admissions in the hostels. May I know why the Government is not taking up construction of hostels in taluka and district headquarters in the State ?

† Sri N. RACHAIAH.—As a matter of policy, Government have already taken action according to the sehemes already in force to construct hostels even in taluka and hobli headqaurters. Because of the scarcity of funds we have not been able to provide such buildings. Anyway, Government are seriously thinking of approaching the Central Government and Government is willing to provide more funds during the current and subsequent years and construct more hostels at all levels.